ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಬಚ್ಚೇಗೌಡ : ರೀಸರ್ಚ್ ಫೌಂಡಿಂಗ್ಸ್ ಏನು ಎಂಬ ಬಗ್ಗೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಏನೂ ಹೇಳಲಿಲ್ಲ. ರೋಗ ಕಂಟ್ರೋಲ್ ಆಗಿದೆಯೇ? ಎಂಬ ಬಗ್ಗೆ ಸಹಾ ಹೇಳಲಿಲ್ಲ. ಬೇರೆ ರಾಜ್ಯಗಳಲ್ಲಿ ಮಾನೋಕ್ರೋಟೋಫಾಸ್ ಮತ್ತು ಡೈಕೋಫಾಲ್ ಔಷಧಿಗಳನ್ನು ಬಳಸಿ ರೋಗ ನಿಯಂತ್ರಣವಾಗಿದೆಯೇ? ಎಂಬ ಬಗ್ಗೆ ಸಹಾ ಮಾಹಿತಿ ಕೊಡಲಿಲ್ಲ. ದಯವಿಟ್ಟು ಮಾನ್ಯ ಸಚಿವರು ಆ ಬಗ್ಗೆ ಹೇಳಬೇಕೆಂದು ಕೋರುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ನಾನು ಈಗಾಗಲೇ ಹೇಳಿದಂತೆ ಮೊಟ್ಟ ಮೊದಲನೆಯದಾಗಿ ಈ ನುಸಿರೋಗ ನಮ್ಮ ರಾಜ್ಯದಲ್ಲಿ ಬಂದಿದೆ. ಮಾನೋಕ್ರೋಟೋಫಾಸ್‌ನಿಂದ ರೋಗ ನಿವಾರಣೆ ಆಗುತ್ತದೋ ಅಥವಾ ಕೇರಳ ರಾಜ್ಯದಲ್ಲಿರುವಂತೆ ನೀಮ್ ಪೌಡರ್‌ನಿಂದ ರೋಗ ನಿವಾರಣೆಯಾಗತ್ತದೋ ಇದರಲ್ಲಿ ಯಾವುದು ಒಳ್ಳೆಯದು ಎಂಬ ಬಗ್ಗೆ ಸಂಶೋಧನೆಯಲ್ಲಿ ನಾವು ಇನ್ನೂ ಇನಿಷಿಯಲ್ ಸ್ಟೇಜ್‌ನಲ್ಲಿದ್ದೇವೆ. ಅದೊಂದೇ ಮುಖ್ಯವಲ್ಲ. ಮಾನ್ಯ ಸೋಮಶೇಖರ್‌ರವರು ಹೇಳಿದಂತೆ ಬಯೋಲಾಜಿಕಲ್ ಪ್ಯಾರಾಸೈಟ್ಸ್‌ಗಳನ್ನು ಕೂಡ ನಾವು ತಯಾರು ಮಾಡುತ್ತಿದ್ದೇವೆ. ಇದರ ಬಗ್ಗೆ ರೀಸರ್ಚ್ ಕೂಡ ನಡೆದಿದೆ. ಅದು ಅಂತಿಮ ಮಟ್ಟದಲ್ಲಿದೆ. ಇನ್ನು ಎರಡು ತಿಂಗಳೊಳಗಾಗಿ ನಮಗೆ ಸಂಶೋಧನೆಯ ಬಗ್ಗೆ ಮಾಹಿತಿ ಸಿಗಬಹುದು.

ಉಪಾಧ್ಯಕ್ಷರು : ಈ ವಿಷಯದ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಗೊಳಿಸೋಣ. ಈಗ ಒಂದು ಪ್ರಕಟಣೆ ಇದೆ.

(10) ಪ್ರಕಟಣೆ

ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿರುತ್ತವೆ:

(1) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 31.3.2000ರಂದು ಯಾವುದೇತಿದ್ದುಪಡಿಗಳು ಇಲ್ಲದೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ 2000ನ್ನು ಅಂಗೀಕರಿಸಿದೆ ಎಂದು ಈ ಮೂಲಕ ತಿಳಿಸುತ್ತಿದ್ದೇನೆ.

(2) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 31.3.2000ರಂದು ವಿಧಾನ ಸಭೆಯು ಪುನರ್ ಅಂಗೀಕರಿಸಿದ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2000ನ್ನು ಯಾವುದೇ ತಿದ್ದುಪಡಿಗಳುಇಲ್ಲದೇ ಅಂಗೀಕರಿಸಿದೆ ಎಂದು ಈ ಮೂಲಕ ತಿಳಿಸುತ್ತಿದ್ದೇನೆ.

ಮಾನ್ಯ ಸದಸ್ಯರುಗಳಾದ ಎ.ರಾಮದಾಸ್, ಎನ್.ಯೋಗೀಶ್ ಭಟ್, ಎಸ್.ಸುರೇಶ್ ಕುಮಾರ್, ಆರ್.ಅಶೋಕ್, ಪಿ.ಸಿ.ಮೋಹನ್ ಹಾಗೂ ಇತರರು ರಾಜ್ಯದಲ್ಲಿ ಐ.ಪಿ.ಫ್ಲ್ಯೂಯಿಡ್ ಘಟಕಗಳನ್ನು ಮುಚ್ಚಿರುವುದರಿಂದ ರೋಗಿಗಳಿಗೆ ಉಂಟಾಗಿರುವ ತೊಂದರೆಯ ಬಗೆಗಿನ ಚರ್ಚೆಯನ್ನು ದಿನಾಂಕ 10ನೇ ಏಪ್ರಿಲ್ 2000ಗೆ ಮುಂದೂಡಲಾಗಿದೆ.